


# ಭಾರತದ ‘ಪಾದ’ ತೋರಬಹುದಾದ ‘ದೀಪ’: ಬಾಬಾಸಾಹೇಬ್ ಅಂಬೇಡ್ಕರ್

**ಕೋಟಿಗಾನಹಳ್ಳಿ ರಾಮಯ್ಯ**

**(ಕೃಪೆ: ವಾರ್ತಾ ಭಾರತಿ)**

**Article Link: https://aksharasurya.com/2023/12/kotiganahalli-ramaiah/**

ಅಂಬೇಡ್ಕರ್ ಅಸ್ಪೃಶ್ಯ ಮತ್ತು ಅವಮಾನಿತ ಜಾತಿಗಳ ವಿಮೋಚಕ. ಕುಲಮೀಮಾಂಸೆಯ ಕುಲಪುರುಷ. ಭಾರತೀಯ ಸಮಾಜಶಾಸ್ತ್ರದ ಪಿತಾಮಹ. ರಾಜಕೀಯ ವಿಜ್ಞಾನಿ. ಪ್ರಾಚೀನ ಭಾರತದ ಸಾಂಸ್ಕೃತಿಕ ಉತ್ಖನನಕಾರ. ಅರ್ಥಶಾಸ್ತ್ರಜ್ಞ. ಸಂವಿಧಾನಕ್ಕೆ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗಳ ಮಾನವ ಘನತೆ ತೋರಿದ ಮಹಾನ್ ಮಾನವತಾವಾದಿ. ಸಾಮಾಜಿಕ ರಾಜಕೀಯ ಹೋರಾಟಗಳ ನೇತಾರ. ಧರ್ಮ, ಸಂವಿಧಾನಗಳ ಮರು ಸಂಸ್ಥಾಪಕ. ಹೀಗೆ ಹೇಳುತ್ತಾ ಹೋದರೆ ಈ ಪಟ್ಟಿ ಬೆಳೆಯುತ್ತಾ ಹೋಗಬಲ್ಲದು. ಬಹುಶಃ ಭಾರತೀಯ ಚಿಂತಕರಲ್ಲಿ ಈ ಮಟ್ಟದ ‘ಬಹುಮುಖಿ’ ಆಯಾಮಗಳಿರುವ ಇನ್ನೊಂದು ವ್ಯಕ್ತಿತ್ವವನ್ನು ಕಾಣುವುದು ಕಷ್ಟವೇ.

ಅಂಬೇಡ್ಕರ್ ಚಿಂತನಾ ಧಾರೆ ಪ್ರಸ್ತುತವೇ, ಅಲ್ಲವೇ ಅನ್ನುವುದಕ್ಕಿಂತ ಎಲ್ಲ ಕಾಲಕ್ಕೂ ಪ್ರಸ್ತುತವಾಗಬೇಕಿದ್ದ ಈ ನಡೆ ಇದ್ದಕ್ಕಿದ್ದಂತೆ ಇಂದೇಕೆ ಎಲ್ಲರನ್ನೂ ತನ್ನತ್ತ ನೋಡಲೇಬೇಕಾದ ಅನಿವಾರ್ಯತೆಗೆ ತಂದಿದೆ ಎಂಬುದು ನನ್ನ ಕುತೂಹಲ. ಇದನ್ನು ಚಾರಿತ್ರಿಕ ಕುತೂಹಲ ಎಂದು ಬೇಕಾದರೂ ಕರೆಯಬಹುದು. ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ಬಾಬಾಸಾಹೇಬರು ತಮ್ಮ ಆತ್ಯಂತಿಕ ರಾಜಕೀಯ ಬೇಡಿಕೆಯಾಗಿದ್ದ ‘ಜಂಟಿ ಮತಕ್ಷೇತ್ರ’ ಬಿಟ್ಟುಕೊಟ್ಟು ‘ಮೀಸಲಾತಿ’ಗೆ ಮಿತಿಯಾದದ್ದು ಒಂದು ಚಾರಿತ್ರಿಕ ವ್ಯಂಗ್ಯವೆಂದೇ ಹೇಳಬಹುದು. ಈ ವ್ಯಂಗ್ಯಕ್ಕೆ ಕಾರಣವಾಗಿದ್ದು. ‘ಅಸ್ಪೃಶ್ಯೇತರ ಭಾರತ’ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಇಂಥ ರಾಜಕೀಯ ‘ನಷ್ಟ’ದ ನೋವು ಎದೆ ಹಿಂಡುತ್ತಿದ್ದರೂ ಬಾಬಾಸಾಹೇಬರು ಒಪ್ಪಂದದ ವೇಳೆ ಸಮಚಿತ್ತದಿಂದಲೇ ನಡೆದುಕೊಂಡಿದ್ದರು. ಆದರೆ, ಈ ನಷ್ಟದಲ್ಲೂ ‘ಲಾಭ’ದ ಎಳೆ ಹಿಡಿದದ್ದು ರವೀಂದ್ರನಾಥ ಟಾಗೂರ್! ‘ಮೀಸಲಾತಿ’ಯಿಂದಾಗಿ ಬಂಗಾಳದಲ್ಲಿ ಅಸ್ಪೃಶ್ಯ ಪ್ರತಿನಿಧಿಗಳ ಸಂಖ್ಯೆಯಲ್ಲಿ ‘ಗಣನೀಯ’ ಹೆಚ್ಚಳವನ್ನು ಕಂಡ ಟಾಗೂರರು ಶಾಲಿನಿಂದ ಮುಖ ಮುಚ್ಚಿಕೊಂಡು ಗಾಂಧೀಜಿಯವರ ತೊಡೆಯ ಮೇಲೆ ತಲೆ ಇಟ್ಟು ಅತ್ತರಂತೆ!

ಜೈ ಗುರುದೇವ್!

ಪರಿಣಾಮವಾಗಿ ಎರಡು ದಶಕಗಳ ನಂತರ ಪೂನಾ ಒಪ್ಪಂದದ 'ನಷ್ಟ' ಅಕ್ಷರಸ್ಥ ದಲಿತ ಸಮುದಾಯದ ಮಧ್ಯಮ ವರ್ಗಕ್ಕೆ 'ಲಾಭ' ಮಾತ್ರದಲ್ಲಿ ಕೊನೆಯಾಗಿದ್ದರ ಪ್ರಜ್ಞಾಹೀನತೆ ಬಾಬಾಸಾಹೇಬರನ್ನು ಪ್ರತಿನಿತ್ಯ ಅಳುವಂತೆ ಮಾಡಿತೆಂಬುದು ಇನ್ನೊಂದು ಚಾರಿತ್ರಿಕ ವ್ಯಂಗ್ಯ.

ಅಂಬೇಡ್ಕರರನ್ನು ಕಂಗೆಡಿಸಿದ್ದು 'ಮಧುಮೇಹ' ಎಂಬುದು ಭೌತಿಕ ನಿಜವಾದರೂ ಅವರ ಅಂತರಂಗ ಚೂರು ಚೂರಾಗಿತ್ತು. ಹೀಗೆ ಚೂರು ಮಾಡಿದವರು ಬೇರೆ ಯಾರೂ ಅಲ್ಲ ಅವರ ಅನುಯಾಯಿಗಳು! ವಾರಸುದಾರಿಕೆ, ನಾಯಕತ್ವಕ್ಕಾಗಿ ನಡೆದ ಕಚ್ಚಾಟ ಅಥವಾ ಪೈಪೋಟಿ, ಸ್ವಹಿತಾಸಕ್ತಿ ಬಾಬಾಸಾಹೇಬರ ಅಂತರಂಗವನ್ನು ಒಡೆದು ಚೂರಾಗಿಸಿತ್ತು. ಅಂತೆಯೇ ಸಂವಿಧಾನ ರಚನೆಯಲ್ಲಿ ತಾವು ಕಡ್ಡಾಯವಾಗಿ ಸಿದ್ಧಗೊಳಿಸಿದ ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗದ ಯಾತನೆ ಒಂದೆಡೆ, ರಾಜಕೀಯವಾಗಿ ಸರಿ ದಿಕ್ಕಿಗೆ ಸಾಗಬೇಕಿದ್ದ 'ನಡೆ'ಯನ್ನು ಮರೆತ ಅನುಯಾಯಿಗಳ 'ಬೌದ್ಧಿಕ ದಾರಿದ್ರ್ಯ' ಇನ್ನೊಂದೆಡೆ; ಕದಡಿದ ಕುಟುಂಬ ಸಾಮರಸ್ಯದಿಂದ ಅಂಬೇಡ್ಕರ್ ಸುರಿಸಿದ ಕಣ್ಣೀರಿಗೆ ಅವರನ್ನು ಮೆಟ್ಟಿಲಾಗಿ ಬಳಸಿಕೊಂಡಿರುವ ಪುಡಿ ಪುಡಿ ಅನುಯಾಯಿಯೂ ಉತ್ತರ ಕೊಡಬೇಕಾಗುತ್ತದೆ.

ಇಂದಲ್ಲ, ನಾಳೆ... ಆ ಹೊತ್ತಿನಿಂದ ಈ ಹೊತ್ತಿನವರೆಗೂ... ಆದುದರಿಂದಲೇ ನಾವು ಅಂಬೇಡ್ಕರ್ ಚಿಂತನೆಗಳ ಪ್ರಸ್ತುತೆಯನ್ನು ಆಲಂಗಿಸಿಕೊಳ್ಳಬೇಕಾದಲ್ಲಿ ನಮಗೆ ನಾವೇ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ.

ಅಂಬೇಡ್ಕರರ ಚಿಂತನೆಗಳನ್ನು ಹೇಗೆ ನೋಡಿದ್ದೇವೆ? ಹೇಗೆ ನೋಡಬೇಕಿತ್ತು? ಈ ಹೊತ್ತು ನೋಡುತ್ತಿರುವ ರೀತಿ–ನೀತಿಗಳ ಹಿಂದಿನ ಇರಾದೆಗಳೇನು? ಅವು ಅವರ ಚಿಂತನೆಗಳ ಮುಂದುವರಿಕೆಯಂತಿವೆಯೇ? ಅಥವಾ ಅದಕ್ಕೆ ತದ್ವಿರುದ್ಧ ನೆಲೆಯತ್ತ ನಡೆಯುತ್ತಿವೆಯೇ? ಹೀಗೆಲ್ಲಾ ಯೋಚಿಸಲೇಬೇಗಾಗುತ್ತೆ. ಯೋಚಿಸುತ್ತಾ ಹೋದರೆ ಜಿಗುಪ್ಸೆಯ ಹೊರತು ಬೇರೆ ಯಾವ ಉತ್ಪನ್ನವೂ ಇದರಿಂದ ಹುಟ್ಟುವುದಿಲ್ಲ.

ಅವರ ಚಿಂತನೆಗಳ ಕುರಿತಂತೆ ಏಳುವ ಮೊತ್ತ ಮೊದಲ ಪ್ರಶ್ನೆ ಅಂಬೇಡ್ಕರ್ ಅಂದರೆ ಏನು? ಮತ್ತು ಯಾರು?

ಅಂಬೇಡ್ಕರ್ ಅಸ್ಪೃಶ್ಯ ಮತ್ತು ಅವಮಾನಿತ ಜಾತಿಗಳ ವಿಮೋಚಕ. ಕುಲಮೀಮಾಂಸೆಯ ಕುಲಪುರುಷ, ಭಾರತೀಯ ಸಮಾಜಶಾಸ್ತ್ರದ ಪಿತಾಮಹ, ರಾಜಕೀಯ ವಿಜ್ಞಾನಿ. ಪ್ರಾಚೀನ ಭಾರತದ ಸಾಂಸ್ಕೃತಿಕ ಉತ್ಖನನಕಾರ. ಅರ್ಥಶಾಸ್ತ್ರಜ್ಞ, ಸಂವಿಧಾನಕ್ಕೆ ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಗಳ ಮಾನವ ಘನತೆ

ತೋರಿದ ಮಹಾನ್ ಮಾನವತಾವಾದಿ. ಸಾಮಾಜಿಕ ರಾಜಕೀಯ ಹೋರಾಟಗಳ ನೇತಾರ. ಧರ್ಮ, ಸಂವಿಧಾನಗಳ ಮರು ಸಂಸ್ಥಾಪಕ. ಹೀಗೆ ಹೇಳುತ್ತಾ ಹೋದರೆ ಈ ಪಟ್ಟಿ ಬೆಳೆಯುತ್ತಾ ಹೋಗಬಲ್ಲದು. ಬಹುಶಃ ಭಾರತೀಯ ಚಿಂತಕರಲ್ಲಿ ಈ ಮಟ್ಟದ 'ಬಹುಮುಖಿ' ಆಯಾಮಗಳಿರುವ ಇನ್ನೊಂದು ವ್ಯಕ್ತಿತ್ವವನ್ನು ಕಾಣುವುದು ಕಷ್ಟವೇ.

ನಾನು ಈ ಮಾತನ್ನು ಪ್ರಕಾಂಡ ವಿದ್ವಾಂಸರಾದ ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಡಿ.ಡಿ. ಕೋಸಾಂಬಿ, ರಾಹುಲ ಸಾಂಕೃತ್ಯಾಯನ, ಆನಂದ ಕುಮಾರ್ ಸಾಮಿ ಮುಂತಾದ ಮಹನೀಯರ ಪಟ್ಟಿಯೊಂದಿಗೆ ಇಟ್ಟು ತೂಗಿ ನೋಡಿದ್ದೇನೆ. ಯಾಕೆಂದರೆ ನನಗೆ ಚಿಂತನೆಯಲ್ಲಿ ಭಾರತದ 'ಪಾದ' ತೋರಬಹುದಾದ 'ದೀಪ'ವೆಂದರೆ ಅದು ಬಾಬಾಸಾಹೇಬರು ಒಬ್ಬರೇ.

ಈ 'ದೀಪ'ವನ್ನು 'ಬುಡ್ಡಿದೀಪ'ವನ್ನಷ್ಟೇ ಆಶ್ರಯಿಸಿ ಬದುಕುತ್ತಿರುವ ಈ ನೆಲದ ನಿರ್ಗತಿಕ ನೆಲೆಗೆ ಒಯ್ಯುವುದೇ ನಿಜವಾದ ಅಂಬೇಡ್ಕರ್ ಚಿಂತನೆಯ ಮುಂದುವರಿಕೆ. ಹೀಗೆ ಒಬೊಬ್ಬರೂ ಅವರವರದ್ದೇ ಆದ ಅಂಬೇಡ್ಕರ್‌ರನ್ನು ಕಂಡುಕೊಳ್ಳಬಹುದು. ನಾನು ಕಂಡುಕೊಂಡಿರುವ ಅಂಬೇಡ್ಕರ್!

ಈ ಅಂಬೇಡ್ಕರ್ ಇಲ್ಲಿಯವರೆಗೂ ಎಲ್ಲಿದ್ದರು? ಯಾಕೆ ಚರಿತ್ರೆಯ ಮುಸುಕು ಇವರನ್ನು ಮುಚ್ಚಿಟ್ಟಿತ್ತು ಎನ್ನುವುದನ್ನು ನೆನೆಪಿಸಿಕೊಳ್ಳುತ್ತಾ ಹೋದರೆ ಈ ದೇಶದ 'ವಿದ್ರೋಹ' ರಾಜಕಾರಣದ 'ಘಾತುಕತನ' ಅರಿವಾಗುತ್ತಾ ಹೋಗುತ್ತದೆ. ಹಾಗೂ ಈ ವಿದ್ರೋಹದಲ್ಲಿ ಬಾಬಾಸಾಹೇಬರು ಯಾರು ವಿಮೋಚನೆಯನ್ನು ಅತ್ಯಂತ ಆದ್ಯತೆಯನ್ನಾಗಿಸಿಕೊಂಡಿದ್ದರೋ ಆ ಜನಾಂಗ ಅಥವಾ ಅಂದು ಅಂಬೇಡ್ಕರ್‌ರ ಅನುಯಾಯಿಗಳೂ ನಂತರದ ನೇತಾರರೂ ಆದ ಅವರ ಮುಂದುವರಿದ ಪೀಳಿಗೆಯಾಗಿ 'ಅಂಬೇಡ್ಕರ್‌ವಾದಿ'ಗಳೆಂದು ಇಂದು ಯಾರು ಯಾರು ಘೋಷಿಸಿಕೊಂಡಿದ್ದಾರೋ ಅವರು ಪರಂಪರೆಯಂತೆ ಅಂಬೇಡ್ಕರ್ ಚಿಂತನೆಗಳ 'ವಿದ್ರೋಹ'ಕ್ಕಷ್ಟೇ ಮಿತಿಯಾಗಿರುವ 'ಬೌದ್ಧಿಕ ದಾರಿದ್ರ್ಯ'ದಿಂದ ನರಳುತ್ತಿದ್ದಾರೆ.

ಕಣ್ಣೆದುರೇ ಸಂಭವಿಸುವ ಚರಿತ್ರೆಯ ತುಣುಕುಗಳೇ (ಈ ಅಂಬೇಡ್ಕರೋತ್ತರ ದಲಿತ ರಾಜಕಾರಣದ ನಡೆಗಳಿಗೆ ಸಂಬಂಧಿಸಿದಂತೆ) ನನ್ನ ವಾದವನ್ನು ಪುಷ್ಟೀಕರಿಸಬಲ್ಲವು.

ಮುಂಬೈಯ 'ರಮಾಬಾಯಿ' ಕೊಳೆಗೇರಿ ಇದುವರೆಗೂ ಯಾವುದೇ 'ಕೋಮುವಾದಿ'(ಬಿಜೆಪಿ) ಪಕ್ಷವನ್ನು ಪ್ರಚಾರಕ್ಕೆ ಬಿಟ್ಟುಕೊಂಡ ನಿದರ್ಶನ ಇಲ್ಲ. ಆದರೆ ಮೊನ್ನೆ ಬಾಬಾಸಾಹೇಬರು ಬರೆದ ಪ್ರಣಾಳಿಕೆಯನ್ನೇ ತಮ್ಮ ರಾಜಕೀಯ ಪ್ರಣಾಳಿಕೆ

ಮಾಡಿಕೊಂಡಿದ್ದ ಪಕ್ಷವೊಂದು... ಮೋದಿಯವರನ್ನು ಬರಮಾಡಿಕೊಂಡಿತ್ತು. ಅದು ಅಷ್ಟಕ್ಕೇ ಆಗಿದ್ದರೆ ತಕರಾರಿಲ್ಲ. ಅದು ಪ್ರಜಾಪ್ರಭುತ್ವ ಮನ್ನಣೆ ಅಂದುಕೊಳ್ಳಬಹುದಿತ್ತು. ಆದರೆ, ವೇದಿಕೆಯ ಮೇಲೆ ಆ ಪಕ್ಷದ ಉದ್ಘಾಟನೆಯನ್ನು ಅತ್ಯಂತ ಕಾವ್ಯಾತ್ಮಕವಾಗಿ ಸಂಯೋಜಿಸಿದ್ದರು. ಆ ಪ್ರಕಾರ ಅಲ್ಲೊಂದು 'ನೀಲಿ' ಬಣ್ಣದ 'ವಸ್ತು'ವೊಂದು ಇರುತ್ತದೆ. ಅದನ್ನು ಮಾನ್ಯ ಮೋದಿಯವರು ಬಂದು ಮುಟ್ಟುತ್ತಾರೆ. ಅದು ಕ್ಷಣಾರ್ಧದಲ್ಲಿ 'ಕೇಸರಿ' ಬಣ್ಣವಾಗಿ ಬದಲಾಗುತ್ತದೆ.

ಆಹಾ! ವಾಟ್ ಎ ಸ್ಪೈಕಿಲರ್ ಜಾದೂ....ಪಿ ಸಿ ಸರಕಾರ್ ಸೆ ಬಿ ನಯೀ ಹೋತ ಹೈ! ಆ ಸ್ವಘೋಷಿತ ಅಂಬೇಡ್ಕರ್‌ವಾದಿ ನಾಯಕನಿಗೆ ಅಂಬೇಡ್ಕರ್ ಬಣ್ಣಗಳ ತಲಸ್ಪರ್ಶಿ ಅಧ್ಯಯನ ಮಾಡಿಯೇ 'ನೀಲಿ'ಯನ್ನು ಆಯ್ಕೆ ಮಾಡಿಕೊಂಡಿದ್ದು ಎನ್ನುವುದು ಅರಿವಿಗೆ ಬಾರದಿರುವುದೇ 'ಘಾತುಕತನ'ದ ಪ್ರತಿಫಲ! ಈ ವರ್ತಮಾನದ ವ್ಯಂಗ್ಯವನ್ನೋ ದ್ವಂದ್ವವನ್ನೋ ಅರ್ಥ ಮಾಡಿಕೊಳ್ಳುವುದು, ಅರ್ಥ ಮಾಡಿಸುವುದು ಹೇಗೆ? ಯಾರಿಗೆ? ಇವು ಪ್ರಶ್ನೆಗಳು.

ಇನ್ನೊಂದು ಉದಾಹರಣೆ ಕೊಡುತ್ತೇನೆ ಕಣ್ಣೆದುರಿನದ್ದು. ಇದು 'ದಲಿತ ಬಣ್ಣ'ಗಳು ಅಂಬೇಡ್ಕರ್ ಹೋರಾಟವನ್ನು ಮುಂದುವರಿಸಲು ಅಲ್ಲಿ ಗ್ಯಾಸ್ ಬಲೂನ್‌ಗಳನ್ನು ಹಾರಿಸಿ ಉದ್ಘಾಟಿಸಲಾಯಿತು. ಆಗ ತಡೆಯಲಾರದೆ ನನಗೆ ನಾನೇ ಬರೆದುಕೊಂಡ 'ಬುಡ್ಡಿದೀಪ'–ಡೈರಿ ಪುಟ ಇಲ್ಲಿದೆ....

ಈಗ ತಾಜಾ ಅನ್ನುವಂತೆ ಅಂಬೇಡ್ಕರ್ ಚಿಂತನೆಗಳಿಗೆ ಅಂಬೇಡ್ಕರ್‌ವಾದಿಗಳಿಂದ ಆಗಿರುವ ಗುಣಾತ್ಮಕ 'ಕೊಡುಗೆ' ವೀಸಾ ರೂಪದಲ್ಲಿ ಕಣ್ಣೆದುರೇ ಇದೆ. ಅಂದು ಅಂಬೇಡ್ಕರ್ ಬರೆಯಬೇಕೆಂದಿದ್ದ ತಮ್ಮ ಆತ್ಮಕಥನದ ಆರಂಭವನ್ನು 'ವೈಟಿಂಗ್ ಫಾರ್ ದಿ ವೀಸಾ' ಹೇಳುತ್ತದೆ. ಅದೇ ರೀತಿ ಈ ಹೊತ್ತನ್ನು ಅಮೆರಿಕಾದ 'ನಾವಿಕ'ರಾಗ ಹೊರಟಿರುವ ಅಂಬೇಡ್ಕರ್‌ವಾದಿಗಳು ಧ್ವನಿಸುತ್ತಿದ್ದಾರೆ.

ಉಪೇಂದ್ರ, ರಾಧಿಕ ಪಂಡಿತರ ದಂಡಿನಂತಹ ಸಾಂಸ್ಕೃತಿಕ ರಾಯಭಾರಿಗಳ ಎದುರು ವೇದ ಘೋಷಗಳ, ಯಾಗ–ಯಜ್ಞಗಳ ಹಿನ್ನೆಲೆ ಭಿತ್ತಿಯಲ್ಲಿ ಸಂಯೋಜನೆಗೊಂಡಿರುವ ಸಂದರ್ಭಕ್ಕೆ ಸರಕಾರದ ಅಧಿಕೃತ ಮನ್ನಣೆಯಿಂದ ಕೇವಲ ಸಭಿಕರಾಗಿ ಹೋಗಿ ಬರುವುದಕ್ಕೆ ಇಷ್ಟೆಲ್ಲ ಹಣ ಪೋಲು ಮಾಡುವ ಬದಲು ಇನ್ನು ಹತ್ತು ಪಟ್ಟು ಹೆಚ್ಚು ಕೊಟ್ಟು ಅಮೆರಿಕದಲ್ಲಿ ಅಬ್ರಹಾಂ ಲಿಂಕನ್ ಹೆಜ್ಜೆಗುರುತಗಳನ್ನೂ, ಫ್ರಾನ್ಸ್‌ನಲ್ಲಿ ವಾಲ್ಟೆರ್‌ನನ್ನೂ, ಚೆಗುವಾರನ ಬೋಲಿವಿಯಾ ಯುದ್ಧ, ಇಟಲಿಯ ಗ್ರಾಮ್ಷಿಯ ವೈಚಾರಿಕತೆಯನ್ನೂ, ವಿಯೆಟ್ನಾಮಿನ ಮಿಡತೆಗಳ ಬಾಂಬುಗಳನ್ನು ತಡೆದು ಗೆದ್ದ ಪಾಠವನ್ನೂ....

ಹೀಗೆ ಹತ್ತು ಹಲವು ದೇಶಗಳಿಗೆ ಯಾಕೆ ಕಳಿಸಬಾರದು? ಆಗ ಅದು ಅಂಬೇಡ್ಕರ್ ಅರಿವಿನ ಪಯಣದ ವಿಸ್ತಾರವಾಗುತ್ತಿತ್ತು. ಆದರೇನು ಮಾಡುವುದು? ಅಂಬೇಡ್ಕರ್ ಎಂಬ ಭಾರತದ 'ಪಾದ' ದೀಪವನ್ನು ಫುಟ್ಬಾಲ್ ಎಂದೇ ಭಾವಿಸಿ ತಾಲೀಮು ನಡೆಸಿರುವ ಇವರಿಗೆ ಇದರಿಂದಾಗಬಹುದಾದ ಭೀಕರ ಭಾರತ, ಅಕರಾಳ–ವಿಕರಾಳ ಭಾರತವನ್ನು ಕಾಣಿಸುವುದು ಸಾಕ್ಷಾತ್ ಅಂಬೇಡ್ಕರ್, ಬುದ್ಧ ಬಂದು ಕಣ್ಣ ರೆಪ್ಪೆ ಬಿಡಿಸಿದರೂ ಕಾಣಲಾಗದಷ್ಟು 'ತಮಂಧ'ದ ಕೇಡು. ಈ ತಮಂಧದ ಕೇಡಿಗೆ ಮತ್ತೆಯೂ ಮೊರೆ ಹೋಗಬೇಕಾದುದ್ದನ್ನು ಈ ಅಂಬೇಡ್ಕರ್‌ವಾದಿಗಳ ಪ್ರಸ್ತುತತೆ ದಾರಿ ತೋರಿಸಬಲ್ಲದು.

ಕೊನೆಯಲ್ಲಿ ನಕಾರಾತ್ಮಕ 'ನಖರಾ' ಎಂದೇ ಕುಖ್ಯಾತಗೊಂಡಿರುವ ನಾನು ನನ್ನ ಅಪಖ್ಯಾತಿಯನ್ನು ಕಾಣುವುದಕ್ಕಾದರೂ ಕಡಿಮೆ ಮಾಡಿಕೊಳ್ಳಬೇಕೆಂಬ ಹಂಬಲದಿಂದ ಈ ಮುಂದಿನ ಬಾಲಂಗೋಚಿ ಬರೆಹವನ್ನು ಗಾಳಿಪಟಗಳ ಗೈರು ಹಾಜರಿಯಲ್ಲಿ ದಿಢೀರ್ ಎಂಟ್ರೀ ಕೊಟ್ಟಿರುವ ಗ್ಯಾಸ್ ಬಲೂನ್‌ಗಳ ಕೂಸಿಗೆ ಕಟ್ಟಬೇಕೆಂದಿದ್ದೇನೆ.

ಅದು ಹೀಗಿದೆ:

'ಪಾಶ್ಚಾತ್ಯ ಸಮಾಜ ಶಾಸ್ತ್ರಜ್ಞರು ಅಧ್ಯಯನ ಮಾಡಿ ಹೇಳಿದ ಮೇಲೆಯೂ ಕಣ್ಣು ತೆರೆಯುವುದಕ್ಕೆ ಹಿಂದು–ಮುಂದೂ ನೋಡುತ್ತಿರುವ ಈ ದೇಶದ ಬೌದ್ಧಿಕತೆಯ ಬಗ್ಗೆ ಏನು ಹೇಳಬೇಕೆಂದು ತೋಚದಾಗಿದೆ. ನಾನಂತೂ ಸಾರಾಸಗಟಾಗಿ ಭಾರತಮಾತೆ ಮತ್ತು ಆಕೆಯ ಮಕ್ಕಳಿಗೆ ಬಡಿದಿರುವ ಗುಪ್ತ ರೋಗವನ್ನು ಪತ್ತೆ ಹಚ್ಚಿಕೊಳ್ಳುವುದಕ್ಕೆ ಇರುವ ಏಕೈಕ ಮಸೂರವೇ ಅಂಬೇಡ್ಕರ್ ಎಂದು ನಂಬಿರುವವನು. ಆದುದರಿಂದ ಭಾರತಮಾತೆಯಾಗಲಿ ಅಥವಾ ಆಕೆಗೆ ಆಶ್ರಯ ಕೊಡುವುದು ಬೇಡ ಎನ್ನುವುದಾದರೆ ಆಕೆಯ ಮಕ್ಕಳಾದ ನಾವು ನಮ್ಮ ಗುಪ್ತರೋಗವನ್ನು ಪತ್ತೆ ಹಚ್ಚಿಕೊಳುವುದಕ್ಕೆ ಅಂಬೇಡ್ಕರ್ ಮಸೂರ ಒಂದೇ ದಿಕ್ಕಾಗಿರುವುದು. ಇದನ್ನು ಫ್ರೆಂಚ್ ಸಮಾಜಶಾಸ್ತ್ರಜ್ಞನೊಬ್ಬ ಒಂದೇ ಒಂದು ವಾಕ್ಯದಲ್ಲಿ ಅಂಬೇಡ್ಕರ್ ಎಂದರೆ ಯಾರೆಂಬುದನ್ನು ಹೇಳುತ್ತಾರೆ. ಟನ್ ಗಟ್ಟಲೆ ಬೌದ್ಧಿಕತೆಯ ಲದ್ದಿ ಉತ್ಪಾದಿಸುತ್ತಿರುವ 'ರದ್ದಿ' ಬೌದ್ಧಿಕ ಶಾಲೆಗಳ ಹಿಮಾಲಯದ ಎತ್ತರದ 'ಹುಸಿ'ಗೆ ಈ ಒಂದು ದಿಟ್ಟ ನುಡಿ ಆ ಹಿಮಾಲಯವನ್ನೇ ಕಪ್ಪು ಬಂದಂತೆ ಕುರುಹಿಲ್ಲದೆ ಇಲ್ಲವಾಗಿಸುವ ಶಕ್ತಿ ಉಳ್ಳದ್ದು ಅವರ ಉಕ್ತಿ.

'ಅಂಬೇಡ್ಕರ್ 'ನುಡಿ'ಗೇನೆ ಸಂಪನ್ನತೆ ತಂದವರು' ಎಂಬುದು ಸಾವಿರಾರು ವರ್ಷಗಳ ಕಾಲ 'ನುಡಿ'ಕೇಳದಂತೆ 'ನುಡಿ'ಯದಂತೆ ಬಹಿಷ್ಕೃತಗೊಂಡಿದ್ದರೂ.... ಅಕ್ಷರ ಮುಟ್ಟದ ಎರಡನೆಯ ತಲೆಮಾರಾಗಿ ಅಂಬೇಡ್ಕರ್ 'ವ್ಯಾಸ'ನಿಗಿಂತಲೂ

ಪೂರ್ವ ವ್ಯಾಸರು. ನನಗೆ ಬುದ್ಧ ಬೇರೆ ಅಲ್ಲ. ಫುಲೆ ಬೇರೆ ಅಲ್ಲ. ಅಂಬೇಡ್ಕರ್ ಬೇರೆ ಅಲ್ಲ. ಅವರೆಲ್ಲರೂ ಬುದ್ಧರು ಪೂರ್ಣಪ್ರಜ್ಞರು. ಪೂರ್ಣಪ್ರಜ್ಞರಿಗೆ ಕಾಲ ಪ್ರಸ್ತುತೆ ಅಥವಾ ಅಪ್ರಸ್ತುತತೆ ಅಂಟಿರುವುದಿಲ್ಲ. ಅವರಿಗೆ ಕಾಲದ ಹಂಗಿರುವುದಿಲ್ಲ. ತಾವರೆ ಮೇಲಿನ ನೀರ ಬಿಂದು ಎಂದರೆ ಇದೇ ಇರಬಹುದೇನೋ?

ಭಾರತದ ಇಂಥ ಬೆಳಕು ಕಣ್ಣಿಗೆ ಬೀಳತೊಡಗಿದ್ದು ಯಾವಾಗ ಅವರ ಸಮೀಕರಣದ ನಂತರದ ಎರಡು ದಶಕಗಳಲ್ಲಿ ಅದು ತಂತಾನೆ ಆದ ಅರಿವಿನಿಂದ ಅಲ್ಲ. ಬದಲಿಗೆ ತಮ್ಮಿಂದ ನಿರ್ವಹಿಸಲಾಗದ ಹೊಣೆಗಾರಿಕೆಯನ್ನು ಸರಕಾರದ ಮೇಲೆ ಹೇರಿದ್ದರಿಂದ. ಅನಂತರ ಸಂಸತ್ತಿನಲ್ಲಿ ಅವರ ಭಾವಚಿತ್ರ ಅನಾವರಣಗೊಳ್ಳಲು ವಿ.ಪಿ. ಸಿಂಗ್ ಪ್ರಧಾನಿಯಾಗುವವರೆಗೂ ಕಾಯಬೇಕಾಯಿತು.

ಅವರ ಬರಹ ಮತ್ತು ಚಿಂತನೆಗಳ ಬಗ್ಗೆ ವ್ಯಾಪಕ ಅಧ್ಯಯನಗಳು ಆರಂಭವಾಗುತ್ತಿರುವುದು ಇತ್ತೀಚೆಗೆ ಮಾತ್ರ. ವಾಲ್ಮೀಕಿ ರಾಮಾಯಣ 'ಬೇಡ' ರಚಿತವೆಂದು ಪೂಜೆಗಿಡದೆ ತುಳಸಿ ರಾಮಾಯಣ ಇಡುವ ಮನಸ್ಸುಗಳಿಗೆ ಅಂಬೇಡ್ಕರ್‌ರ ವೈಚಾರಿಕ ತೀಕ್ಷ್ಣತೆ ಸರ್ವಥಾ ಸಮ್ಮತವಾಗಲಾರದು. ಈ ಮಾತಿಗೆ ದೇವನೂರು ಮಹದೇವರ ಇತ್ತೀಚಿನ ಪ್ರಜಾವಾಣಿ ಪತ್ರಿಕೆಯ ಸಂದರ್ಶನವೇ ಸಾಕ್ಷಿ.

ಆ ಸಂದರ್ಭದಲ್ಲಿ ದೇವನೂರು ಮಣಿಪಾಲ ಪ್ರಸಂಗ ನೆನೆಪಿಸಿಕೊಂಡಿದ್ದಾರೆ. ಅವರು ಮಣಿಪಾಲದಲ್ಲಿ ಅಂಬೇಡ್ಕರ್ ಮತ್ತು ಗಾಂಧಿಯವರನ್ನು ಬೆಸೆದು ನೋಡಿದ ಪರಿ ಅನಂತಮೂರ್ತಿಯವರನ್ನೂ ಕರಗಿಸಿ, ಕಣ್ಣಂಚಿನಲ್ಲಿ ಹನಿಗೂಡಿ ನಿಲ್ಲುವಂತೆ ಮಾಡಿತ್ತಂತೆ. ಅಂಥ ಹೊತ್ತು ಅನಂತಮೂರ್ತಿಯವರು ಅಣಿಮುತ್ತು ಹೀಗೆ ಹೊರ ಬಿತ್ತಂತೆ.

'ನನಗೆ ಇದುವರೆಗೂ ಅಂಬೇಡ್ಕರ್ ಅಂದ್ರೆ ಸ್ವಲ್ಪ ಕಿರಿ ಕಿರಿ ಇತ್ತು .. ಬ್ಲ್ಯಾ.. ಬ್ಲ್ಯಾ..' ಈ ಕಿರಿ ಕಿರಿ ಪದ ನನ್ನನ್ನು ಕಿಡಿ ಕಿಡಿಯಾಗುವಂತೆ ಮಾಡಿದೆ. ಅಂಬೇಡ್ಕರ್ ಬರಹಗಳಲ್ಲಿ ಅನಂತಮೂರ್ತಿಯವರಿಗೆ ಕಿರಿ ಕಿರಿಯಾಗುವಂಥದ್ದೇನಿತ್ತೋ ಅಥವಾ ಇದೆಯೋ ನನಗೆ ತಿಳಿಯದು. ಆದರೆ, ದೇವನೂರು ಕೂಡ ಯಾಕೆಂದು ಕೇಳಿಲ್ಲ, ಕೇಳಬೇಕಿತ್ತು. ಅಂಬೇಡ್ಕರ್ ಬಗ್ಗೆ ಅನಂತಮೂರ್ತಿಯವರಿಗೆ ಅಭಿಪ್ರಾಯ ಇದ್ದಲ್ಲಿ ಖಂಡಿತ ಅದು ಒಪ್ಪತಕ್ಕದ್ದು. ಆದರೆ, ಕಿರಿ ಕಿರಿಯಾಗುತ್ತದೆ ಎಂದರೆ ಖಂಡಿತ ಅದು ಯಾಕೆಂದು ನಾವು ಅರ್ಥ ಮಾಡಿಕೊಳ್ಳಲೇಬೇಕಾಗುತ್ತದೆ.

ಸಾಮಾನ್ಯ ಜನರಿಗೆ ಇಂಥ ಕಿರಿಕಿರಿ ಇರುವುದು ಅದು ಸಾರ್ವತ್ರಿಕಗೊಳ್ಳುತ್ತಿರುವ ಅಂಬೇಡ್ಕರ್ ಪ್ರತಿಮೆಗಳ ಮೇಲೆ ನಡೆದಿರುವ ಸರಣಿ ದಾಳಿಗಳಿಂದ ಅರ್ಥ ಮಾಡಿಕೊಳ್ಳಬಹುದು. ಆದರೆ, ಅನಂತಮೂರ್ತಿಯವರಂತಹ ಪೂರ್ಣಪ್ರಜ್ಞ

ರಿಗೂ ಕಿರಿ ಕಿರಿಯಾಗುತ್ತದೆ ಎಂದರೆ ಅದು ಈ ದೇಶಕ್ಕಿರುವ ಮನೋರೋಗದ ಲಕ್ಷಣ ಎಂದೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಛೇ! ಹೀಗೆ ಭಾವಿಸಬೇಕಾದ್ದು ಎಂಥ ದೌರ್ಭಾಗ್ಯ.

ಇನ್ನು ಕಣ್ಣ ಗಾಯವನರಿಯದ ಸಿದ್ಧಾಂತಿಗಳು ಅಂಬೇಡ್ಕರರನ್ನು 'ವರ್ಷಿಪಿಂಗ್ ಫಾಲ್ಸ್ ಗಾಡ್ಸ್' ಎಂದು ಬರೆದವರು, ಸದಾ ಕಾಲ ಅವರ 'ನಡೆ'ಗೆ ಕಾಲ್ತೊಡಕಾದವರು, 'ಹಿಂದೂ ಕೋಡ್ ಬಿಲ್'ನ್ನು ಹಲ್ಲು ಕಿತ್ತ ಹಾವು ಮಾಡಿದ ಹಾವಾಡಿಗರು ಇಂದೇಕೆ ಹೊಸ ಪುಂಗಿ ಊದುತ್ತಿರುವುದು. ಅಂತೆಯೇ ಆಳುವ ವರ್ಗದ 'ಮೆದು ಕೇಸರಿ'ಗಳು ಅಂಬೇಡ್ಕರ್ ಹೆಸರಿನಲ್ಲಿ ಮೂರ್ತಿ ಸ್ಥಾಪನೆಗೆ ನಾಮಕರಣಕ್ಕಷ್ಟೇ ಪ್ರೋತ್ಸಾಹಿಸುವುದು.

ಭಾರತ ದೇಶ ಅಂಬೇಡ್ಕರರನ್ನು 'ರಾಂಗ್ ಶೋ ಕೇಸಿಂಗ್'ಗೆ ಒಳಗು ಮಾಡಿದೆ. ಅಂತೆಯೇ ಅಂಬೇಡ್ಕರ್‌ವಾದಿಗಳು ಅವರನ್ನು ಮೂರ್ತೀಕರಣ ಮತ್ತು ಗ್ರನೇಡಿಕರಣಕ್ಕೆ ಬಂಧಿಸಿಟ್ಟಿದ್ದೇಕೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಕೆಟ್ಟ ಸಂರಚನೆಗಳಲ್ಲಿ ಬಂಧಿಸಲಾಗಿರುವ ಅಂಬೇಡ್ಕರ್ ತಂತಾನೇ ಇಂಥ ಪಂಜರಗಳನ್ನು ಮುರಿದು ತಂತಾನೆ ಒಡಕೊಂಡು ಹರಿವ ಗಂಗೆಯಾಗಿ ಈ ನೆಲದುದ್ದ ನೆಲದಗಲ ಹರಿಯಬಲ್ಲದು, ಅಂಬೇಡ್ಕರ್ ಎಂದರೆ ಗಂಗೆ, ಜ್ಞಾನ ಗಂಗೆ! ನ್ಯಾಯ ಗಂಗೆ!

**ಗ್ಯಾಸ್ ಬಲೂನ್ ಗೀತಾ ವರ್ಸಸ್ ಭಗವದ್ಗೀತಾ..**

ಅದ್ಯಾವ ಗಳಿಗೆ ನಮ್ಮ ದಲಿತ ಬಣ ನಾಯಕರು ದಲಿತ ಚಳವಳಿಯ ಬಣಗಳು ಒಂದಾಗಲೆಂದು ಗ್ಯಾಸ್ ಬಲೂನುಗಳನ್ನು ಹಾರಿಸಿ ಶುಭ ಸಮಾರಂಭವೊಂದನ್ನು ಉದ್ಘಾಟಿಸಿದರೋ ಆ ಗಳಿಗೆಯಿಂದಲೇ ಅವರು ಹಾರಿಸಿದ ಗ್ಯಾಸ್ ಬಲೂನ್‌ಗಳು ಬಂದು ನನ್ನ ಮಿದುಳಲ್ಲಿ ಅಹೋರಾತ್ರಿ ಹಾರಾಟ ನಡೆಸಿವೆ.

ಅವರು ಆ ಗ್ಯಾಸ್ ಬಲೂನುಗಳಿಗೆ ಹೈಡ್ರೋಜನ್ನೋ, ಹೀಲಿಯಮ್ಮೋ, ಮಿಥೇನೋ ಏನೋ ಒಂದು ಅನಿಲ ತುಂಬಿಸಿರಬೇಕು. ಗ್ಯಾಸ್‌ಗೂ ದಲಿತರಿಗೂ ಅವಿನಾಭಾವ ಸಂಬಂಧ ಇರುವುದರಿಂದ ಅಂದರೆ ದಲಿತರನ್ನು ಈ ಭಾರತ ಸಗಣಿ ಎಂದೇ ಪರಿಗಣಿಸಿರುವುದರಿಂದ ಗೋಬರ್ ಗ್ಯಾಸ್ ಓಕೆ, ಮಿಕ್ಕ ಗ್ಯಾಸ್‌ಗಳು ಯಾಕೆ? ಹೀಗೆ ಕೈಗಾರಿಕಾ ಬಳಕೆಯ ಗ್ಯಾಸ್‌ಗಳನ್ನು ತುಂಬಿರುವುದರಿಂದ ದಲಿತ ಐಕ್ಯತೆಗೆ ಏನು ಲಾಭವಿದೆಯೋ ತಿಳಿಯದು. ಆದರೆ, ಅದರ ತಯಾರಿಕರಿಗಂತೂ ಭವಿಷ್ಯವಿದೆ, ಮಾರುಕಟ್ಟೆ ದೃಷ್ಟಿಯಿಂದ.

ಹೀಗೆಂದರೆ ದಲಿತ ಬಣಗಳ ಸಂಖ್ಯಾವಾರು ಲೆಕ್ಕಹಾಕಿದರೆ ಇಪ್ಪತ್ತಕ್ಕೂ ಹೆಚ್ಚು ಬಣಗಳಿವೆ. ಈ ಬಣಗಳಲ್ಲಿ ರಾಷ್ಟ್ರಾಧ್ಯಕ್ಷರಿಂದ ರಾಜ್ಯಾಧಕ್ಷರವರೆಗೆ ಮೊದಲ ಸಾಲಿನ

ಪದಾಧಿಕಾರಿಗಳ ಸಂಖ್ಯೆ ಹತ್ತು ಅಂದುಕೊಂಡರೆ 30 ಜಿಲ್ಲೆಗಳ್ಲಲಿ ಇವರ ಸಂಖ್ಯೆ 300. ಇನ್ನು ಎರಡನೆಯ ಹಂತದ ನಾಯಕತ್ವ ಜಿಲ್ಲಾ ಮಟ್ಟದ್ದು. ಐದು ಜನ ಪದಾಧಿಕಾರಿಗಳು ಅಂದುಕೊಂಡರೆ ಮೂವತ್ತು ಜಿಲ್ಲೆಗಳಲ್ಲಿ ಇವರ ಸಂಖ್ಯೆ 1,500. ತಾಲ್ಲೂಕು / ಹೋಬಳಿ ಅಂದಾಜು 10 ಸಾವಿರ ಜನರಂತು ಇದ್ದೇ ಇರುತ್ತಾರೆ. ಸರಾಸರಿ ಒಂದು ಬಣದ ಎಲ್ಲ ಹಂತಗಳ ಪದಾಧಿಕಾರಿಗಳ ಸಂಖ್ಯೆ 12 ಸಾವಿರ ಮುಟ್ಟುತ್ತದೆ. ಒಂದು ಬಣದ್ದು ಇಷ್ಟಾದರೆ ಇನ್ನು ಇಪ್ಪತ್ತು ಬಳಗಳದ್ದು ಅಂದಾಜು ಎರಡೂವರೆ ಲಕ್ಷ ಮುಟ್ಟಬಹುದು.

ಒಂದು ವೈಲ್ಡ್ ಗೆಸ್! ಈ ಎಲ್ಲಾ ನಾಯಕರೂ ತಮ್ಮ ಸಮಾರಂಭಗಳಲ್ಲಿ ಗ್ಯಾಸ್ ಬಲೂನ್ ಹಾರಿಸಿ ಉದ್ಘಾಟಿಸುವ ಮಾದರಿಯನ್ನೇ ಅನುಸರಿಸುವುದನ್ನು ಒಬ್ಬೊಬ್ಬ ಪದಾಧಿಕಾರಿಯೂ ವರ್ಷಕ್ಕೆ ಕನಿಷ್ಠ ಹತ್ತಾದರೂ ಕಾರ್ಯಕ್ರಮ ಸಂಯೋಜಿಸುವುದು ಅನಿವಾರ್ಯ. ಪ್ರತಿ ತಿಂಗಳು ತನ್ನ ನಾಯಕತ್ವದ ಅಸ್ತಿತ್ವದ ಉಳಿವಿಗಾಗಿ. ಆಗ ಈ ಎರಡೂವರೆ ಲಕ್ಷ ಬಲೂನ್‌ಗಳನ್ನು ಹತ್ತರಿಂದ ಗುಣಿಸಬೇಕಾಗುತ್ತದೆ. ಆಗ ಬರುವ ಮೊತ್ತ ಎರಡೂವರೆ ಕೋಟಿ ಅಂದರೆ ಗ್ಯಾಸಿಗೂ ಗ್ಯಾಸ್ ಬಲೂನ್‌ಗಳಿಗೂ ಗ್ಯಾಸ್ ಲೈನ್‌ಗಳಿಗೂ ಮಸ್ತ್ ಲಿಂಕಿದೆ ಎಂದಾಯಿತು. ಹೌದು ಸಾಮ್ರಾಜ್ಯಶಾಹಿ ಸೈತಾನ ನೆಡದು ಬರುವುದು ಹೀಗೆ.

ಅವನು ಕಾಡು, ಮರಭೂಮಿಗಳನ್ನು ಸೀಳಿ ಬರಬಲ್ಲ. ಅಂದೊಂದೇ ಲಾಭಕ್ಕಿರುವ ರಾಜಮಾರ್ಗ ಎಂದಾದಲ್ಲಿ... ಆದುದರಿಂದ ಬಲೂನುಗಳಿಗೆ ಗ್ಯಾಸ್‌ನ್ನು ತುಂಬೋಣ! ನೀಲಾಕಾಶಕ್ಕೆ ನೆಗೆಸಿ ಬಿಡೋಣ! ಲೆಗಸಿಗಳಾಗೋಣ ಎಂಬ ನಮ್ಮ ದಲಿತ ನಾಯಕರ ಉದಾತ್ತ ಧೈರ್ಯವನ್ನು ಗೌರವಿಸೋಣ. ಆದರೆ, 'ಬುರುಡೆ'ಗೆ ಗ್ಯಾಸ್ ಬಿಡ್ತಾನೆ ಅನ್ನುವ ಕುಹಕಾರ್ಥವೂ ಇದೆಯೆಲ್ಲಾ!? ಆದುದ ರಿಂದ ಭವಿಷ್ಯದ ದಲಿತ ಅಸ್ತಿತ್ವ ರಾಜಕಾರಣಕ್ಕೂ ಗ್ಯಾಸ್ ಬಲೂನ್‌ಗಳ ಮೂಲಕ ಹಾರಬೇಕಾಗಿರುವುದರಿಂದ ನಾನು ಚರಿತ್ರೆಯಲ್ಲಿ ಈ ಗ್ಯಾಸ್ ಸುತ್ತ ಇರುವ ಪಠ್ಯಗಳ ಉನ್ನತಾಭ್ಯಾಸಕ್ಕೆ ತೊಡಗಬೇಕೆಂದಿದ್ದೇನೆ. ನನಗೆ ನೆನಪಿರುವ ಗ್ಯಾಸ್ ಆಧಾರಿತ ಪಠ್ಯಗಳು ದಿ ವೇಜಸ್ ಆಫ್ ಫಿಯರ್, ಗ್ಯಾಸ್ ಚೆಂಬರ್ಸ್ (ಹಿಟ್ಲರ್) ಅರೌಂಡ್ ದಿ ವರ್ಲ್ಡ್ ಇನ್ ಹಾಟ್ ಬಲೂನ್.

ಜೈ ಭೀಮ್ !

ಜೈ ರಾಮ್!

ಹಿಂದೂ ಕೋ ರಾಮ್ ರಾಮ್!

ಮುಸಲ್ಮಾನ್ ಕೋ ಸಲಾಂ ಸಲಾಂ!